ಮೈಸೂರ ಗೆಜಿಟ್

ಸರ್ಕಾರದಿಂದ ಫಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಏಪ್ರೆಲ್ ತಾ॥ 19, ಸ್ಯ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

3ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟ್ಸರು, ಚೀಫ್ ಜಡ್ಜ್ಸೀರುವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ರೆಸಿಡೆಂಟರ ಇಲಾಖಾ.

ಇಸ್ತಿಹಾರ್ ನಾಮೆ.

ನಂ. 1. ತಾರೀಖು 3ನೇ ಏಪ್ರೆಲ್ 1884.

ಮೈಸೂರು ದೇಶದ ರೆಸಿಡೆಂಟರವರು, 1884ನೇ ಇಸವಿ ಜನವರೀ 30ನೇ ಮತ್ತುಂ 24ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಪ್ರಕಟಿಸಲ್ಪಟ್ಟ ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿಗೋಸ್ಕರ ಮ್ಯುನಿಸಿಪಲ್ ಕಮ್ಮಿಷರ್‌ರುಗಳ ಚುನಾವಣೆಯನ್ನು ಕ್ರಮಪಡಿಸುವ ಬಗ್ಯೆ ಉಂಟೂದ ನಿಬಂಧನೆಗಳಲ್ಲಿ ಇದರಡಿ ಬರುವ ಬದಲುವಣಿಗಳು ಮಾಡಲ್ಪಡತಕ್ಕದ್ದೆಂದು ಹುಕ್ಕುಂ ಮಾಡುತ್ತಾರೆ:—

1. ಪೀಠಿಕೆ ಮತ್ತು 1—2ನೇ ನಿಬಂಧನೆಗಳಿಗೆ ಬದಲಾಗಿ ಇದರಡಿ ಬರುವದನ್ನು ಕೇರಿಸತಕ್ಕದ್ದು:—

" 1883ನೇ ಇಸವಿಯ ಬೆಂಗಳೂರು ಮ್ಯುನಿಸಿಪಲ್ ರೆಗ್ಯೂಲೇಷ್ನ 3 ವ 5ನೇ ಸೆಕ್ಷನಿನ ನಿಯಮಗಳನುಸರಿಸಿ ಮೈಸೂರು
" ದೇಶದ ರೆಸಿಡೆಂಟರವರು ಹುಕುಂ ಮಾಡುವದೇನಂದರೆ, ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಟೇಷನಿನ ಯಕ್ಸ ಆಫಿಷಿಯೋ ಯಾನೆ ಉ
" ದ್ಯೋಗಧರ್ಮತಃ ಮೆಂಬರುಗಳಲ್ಲದ ಇತರ ಮ್ಯುನಿಸಿಪಲ್ ಕಮ್ಮಿಷರ್‌ರುಗಳು ಸ್ಥಳವಿಭಾಗಗಳ ಅನುಸಾರಕ್ಕೆ ಬದಲಾಗಿ ಪ್ರಜೆಗಳ ತರ
" ಗತಿಗಳನುಸರಿಸಿ ಏಯಿಂದ ಮೊಕರರ್ರ್ಮಾಡಲ್ಪಡತಕ್ಕದ್ದು; ಮತ್ತು ಉದ್ಯೋಗಗಳು ಖಾಲಿಆದಾಗ ಅವ್ರುಗಳು ಈ ನಿಬಂಧನೆಗಳನುಸರಿಸಿ
" ಚುನಾವಣೀ ಮೂಲಕ ಭರ್ತೀಮಾಡಲ್ಪಡತಕ್ಕದ್ದು.

2. "ಇದರಡಿ ಕಂಡ ನಿಬಂಧನೆಗಳಿಂದ ಇರಾದೆ ಕೊಡವದಕ್ಕೆ ಅರ್ಹರಾದ ಸಿವಿಲ್ ವ ಮಿಲಿಟೇರಿ ಸ್ಟೇಷನಿನ ತಮಾಂ ಪ್ರಜೆಗಳ್ಗೂ
" ಇದರಡಿ ಕಂಡ ಮೂರು ತರಗತಿಗಳ ಪೈಕಿ ಬಂದರಲ್ಲಿ ದಾಖಲ್ಮಾಡಲ್ಪಟ್ಟು ಅಂಥಾ ಪ್ರತಿ ತರಗತಿಯ ಇರಾದೆದಾರರೂ ಈ ಕೆಳಗಿನ ದಾವ್ಯಾ
" ಷಾಯಿ ಪ್ರಕಾರ ಅವರ ಪ್ರತಿನಿಧಿಗಳನ್ನು ಪ್ರತ್ಯೇಕವಾಗಿ ಚುನಾಯಿಸತಕ್ಕದ್ದು.

ತರಗತಿಯ ಹೆಸರು.	ಪ್ರತಿನಿಧಿಗಳ ಸಂಖ್ಯೆ.
(1) ಯೂರೋಪಿಯ್ಯರ ವ ಯೂರೇಷಿಯ್ಯರು ..	6
(2) ಮಹಮ್ಮದೀಯರು ..	4
(3) ಹಿಂದೂ ವ ಇತರರು ..	8
	18 "

(2) 6ನೇ ರೂಲಿನ (ಬಿ) ಕ್ಲಾಜಿನ ಪಕ್ಕದಲ್ಲಿ ನಮೂದವಾಡಲ್ಪಟ್ಟ "ಮನೆಗಳು, ಕಟ್ಟಗಳು, ಅಥವಾ ಜಮ್ರ್ಗಳು ಇವು ಗಳ ಮೇಲೆ ವಟ್ಟುಕೆಲಸಗಳಿಗಾಗಿಯಾಗಲಿ, ಬೆಳಕು ಪುಂಟುಮಾಡುವ ಬಗ್ಗೆ ಅಥವಾ ನೀರಾವರಿ ಕೆಲಸಗಳಿಗಾಗಿಯಾಗಲಿ ಅವುಗಳ ಸಾಲೀ ಯಾನಾ ಹುಟ್ಟುವಳೀ ಪ್ರಕಾರ ತೆರಿಗೆಗಳು" ಯಂಬ ಮಾತುಗಳು ಬಿಟ್ಟು ಬಿಡಲ್ಪಡತಕ್ಕದ್ದು.

(3) 7ನೇ ರೂಲ್‌ನಲ್ಲಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗಳಿಗೆ ಶೇರಿಯಿರುತ್ತಾನೊ ಅಂಥಾ ತರಗತಿಗಳ" ಯೆಂಬ ಮಾತುಗಳಿಗೆ ಬದಲಾಗಿ "ಖಾಲಿಪಡಿಸಿದ ಕಮ್ಮಿಷನರು ಯಾವ ತರಗತಿಗೆ ಪ್ರತಿನಿಧಿಯಾಗಿದ್ದನೊ ಅಂಥಾ ತರಗತಿಯ" ಯಂಬ ಮಾತ್ಯ ಗಳು ಶೇರಿಸತಕ್ಕದ್ದು.

(4) 9ನೇ ರೂಲ್‌ನಲ್ಲಿ "ಭರ್ತಿಯಾಗತಕ್ಕ" ಯಂಬ ಮಾತಿನ ಆಜಿಗೆ "ಆತನು ಶೇರಿರತಕ್ಕ ತರಗತಿಯ ಪ್ರತಿನಿಧಿಗಳಲ್ಲಿ" ಯಂಬ ಮಾತುಗಳು ಶೇರಿಸತಕ್ಕದ್ದು.

ಹುಕ್ಕುಂ ಬಮೋಜೇಬ
ಹೆಚ್. ಮೈಲಿ, ಮೇಜರ್
ರೆಸೀಡೆಂಟರ ಅಸಿಸ್ಟೆಂಟ್.

ಜುಡಿಷಿಯಲ್ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 5ನೇ ಏಪ್ರಿಲ್ 1884.

ಇದರಡಿ ನಮೂದು ಮಾಡಲ್ಪಟ್ಟ ದೊಡ್ಡ ಮನುಷ್ಯರು, ಸ್ರ್ 1879ನೇ ಇಸವಿ ಫಿಬ್ರವರೀ 18ನೇ ಮಕ್ತುಂ ರೂಲ್ಸ್ ಅನುಸರಿಸಿ ಮೈಸೂರು ಚೀಫ್ ಕೋರ್ಟಿನಲ್ಲಿ ಅಡ್ವೋಕೇಟರಾಗಿ ದಾಖಲ್ಮಾಡಲ್ಪಟ್ಟಿರುತ್ತಾರೆ:—

108. ನುಗ್ಗೀಹಳ್ಳಿ ಚಲುವಯ್ಯಂಗಾರ್ .. ಬ್ಯಾರಿಸ್ಟರ್ ಆಫ್ ಲಾಸ್ ಮತ್ತು ಮದ್ರಾಸ್ ಹೈಕೋರ್ಟು ವಕೀಲರು.

ಹುಕ್ಕುಂ ಬಮೋಜೇಬ್,
ಎಸ್. ಹೇಮೂಜಿಡಾಫ್,
ರಿಜಿಸ್ಟ್ರಾರ್.

ಫಿನಾರ್ಷಿಯಲ್ ಇಲಾಖಾ.

1882ನೇ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವ ರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್ಸ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್ಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡರ್ಸ್,
ಕಾಂಪ್ಟ್ರೋಲರ್.